ಭೂಗೋಳ ಶಾಸ್ತ್ರ ಮಾತ್ರ ಇದೆ. ಆದರೆ ವಿಜ್ಞಾನ ವಿಭಾಗ ಪ್ರಾರಂಭಿಸುವಂಥ ಪ್ರಸ್ತಾವನೆ ಸರ್ಕಾರದ ಮುಂದೆ ಬರಲಿಲ್ಲ. ಇದುವರೆಗೆ ಬಂದಿಲ್ಲ. ಆದರೆ ಈಗ ತಾವು ಅಗ್ರಹಪೂರ್ವಕವಾಗಿ ಈ ಬಗ್ಗೆ ಹೇಳುತ್ತಿದ್ದೀರಿ. ಖಂಡಿತವಾಗಿ ನಾನು ಇದನ್ನು ಪರಿಗಣಿಸುತ್ತೇನೆ. ಆದರೆ ಯಾವುದೇ ಆರ್ಟ್ಸ್ ಕಾಲೇಜಿನಲ್ಲಿ ಸೈನ್ಸ್ ವಿಭಾಗವನ್ನು ಪ್ರಾರಂಭ ಮಾಡುವುದಕ್ಕೆ ಕೆಲವು ಮಾಹಿತಿಗಳು ನಮಗೂ ಬೇಕಾಗುತ್ತದೆ ಮತ್ತು ಅದಕ್ಕೆ ತಕ್ಕ ವ್ಯವಸ್ಥೆಗಳನ್ನು ಮಾಡಬೇಕಾಗುತ್ತದೆ. ಉದಾಹರಣೆಗೆ ಅಲ್ಲಿಗೆ ನಾವು ಹೋಗಿ ನೋಡಿಕೊಂಡು ಬರಬೇಕಾಗುತ್ತದೆ. ಅಲ್ಲಿ ಸ್ಟೂಡೆಂಟ್ಸ್ ಎಷ್ಟು ಜನ ಬರುತ್ತಿದ್ದಾರೆ. ಪಿ.ಯು. ಕಾಲೇಜ್‌ಗಳು ಸುತ್ತಮುತ್ತ ಎಷ್ಟಿವೆ, ಅದರ ಫೀಡ್‌ಬ್ಯಾಕ್ ಇದೆಯಾ, ಇತ್ಯಾದಿ ಅಂಶಗಳನ್ನೆಲ್ಲಾ ನಾವು ನೋಡಿ ಫೈಲ್ ತಯಾರು ಮಾಡಬೇಕಾಗುತ್ತದೆ. ಆದ್ದರಿಂದ ಆ ಹಿನ್ನೆಲೆಯಲ್ಲಿ ನಾನು ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೇನೆ. ಆಗಲಿಲ್ಲ. ನಾನು ಪ್ರಾಮಾಣಿಕವಾದ ಉತ್ತರವನ್ನು ಕೊಟ್ಟಿದ್ದೇನೆ. ನಿಮ್ಮ ಗುಡಿಬಂಡೆಯನ್ನು ಈ ವರ್ಷದ ಪಟ್ಟಿಯಲ್ಲಿ ನಾವು ಸೇರಿಸಿಲ್ಲ. ಆದರೆ ಅದಕ್ಕೇ ಮತ್ತೆ ನಾನು ಹೇಳುತ್ತೇನೆ ವಾಟಾಳ್‌ರವರು ಸಿಟ್ಟಾಗುವುದಿಲ್ಲವೆಂದು ತಿಳಿದು ಹೇಳುತ್ತಿದ್ದೇನೆ. ನೀವು ಇಷ್ಟೊಂದು ಪ್ರೀತಿಯಿಂದ ಕೇಳುತ್ತಿದ್ದೀರಿ. ಖಂಡಿತವಾಗಿ ನಾನು ಇದನ್ನು ಪರಿಗಣಿಸುತ್ತೇನೆ.

ಸಂತೇಮಾರನಹಳ್ಳಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಂಜೂರಾತಿ

155 (840) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಪ್ರಥಮ ದರ್ಜೆ ಕಾಲೇಜು ಇಲ್ಲದೇ ಇರುವ ಕಾರಣ ಸಂತೇಮರಳ್ಳಿ ಕೇಂದ್ರ ಸ್ಥಾನದಲ್ಲಿ ಸರ್ಕಾರ 2006–07ರಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಸೂಕ್ತ ಕಟ್ಟಡ ಹಾಗೂ ಸ್ಥಳಾವಕಾಶವನ್ನು ಕಲ್ಪಿಸಿಕೊಡಲಾಗುವುದೇ ;

(ಆ) ಹಾಗಿದ್ದಲ್ಲಿ, ಎಂದು ಮಂಜೂರಾತಿ ನೀಡಲಾಗುವುದು ?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):

(ಅ) ಮತ್ತು (ಆ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಯಾವುದೇ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲದ ಕಾರಣ ಸೂಕ್ತ ಕಟ್ಟಡ ಹಾಗೂ ಸ್ಥಳಾವಕಾಶವನ್ನು ಕಲ್ಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ಧ್ರುವನಾರಾಯಣ: ಮಾನ್ಯ ಅಧ್ಯಕ್ಷರೆ, ನನಗೂ ಕೂಡ 'ಉದ್ಭವಿಸುವುದಿಲ್ಲ', 'ಇಲ್ಲ' ಎಂದೇ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಇಷ್ಟೇ. ನನ್ನ ಸಂತೇಮರಳ್ಳಿ ಕ್ಷೇತ್ರ ಮೀಸಲು ಕ್ಷೇತ್ರವಾಗಿದೆ. ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಪ್ರಥಮ ದರ್ಜೆ ಕಾಲೇಜು ಕೂಡ ಇಲ್ಲ. ಐದು. ಪಿ.ಯು. ಕಾಲೇಜ್‌ಗಳು ಇವೆ. ಒಂದು ವಿಧಾನಸಭಾ ಕ್ಷೇತ್ರದಲ್ಲಿ ಒಂದಾದರೂ ಪ್ರಥಮ

ದರ್ಜೆ ಕಾಲೇಜು ಇರಬೇಕು. ಅದರಲ್ಲೂ ನನ್ನ ಕ್ಷೇತ್ರ ಮಾನ್ಯ ಶ್ರೀರಾಮರೆಡ್ಡಿಯವರ ಕ್ಷೇತ್ರದಂತೆ ಪೋಸ್ಟ್‌ಬ್ಯಾಕ್‌ವರ್ಡ್. ಚಾಮರಾಜನಗರ ತಾಲ್ಲೂಕಿಗೆ ಸುಮಾರು ಶೇಕಡ 70 ರಷ್ಟು ಭಾಗ ನನ್ನ ಪ್ರದೇಶ ಬರುತ್ತದೆ. ಅದು ಅತ್ಯಂತ ಹಿಂದುಳಿದ ತಾಲ್ಲೂಕು. ಡಾ: ನಂಜುಂಡಪ್ಪ ವರದಿ ಪ್ರಕಾರ ಕೂಡ ಪೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕು. ದಯಮಾಡಿ ತಾವು ದೊಡ್ಡ ಮನಸ್ಸು ಮಾಡಬೇಕು. ನನ್ನ ವಿಧಾನಸಭಾ ಕ್ಷೇತ್ರವು ಪರಿಗಣಿಸಬಹುದಾದ ಅತ್ಯಂತ ಹಿಂದುಳಿದ ತಾಲ್ಲೂಕಾಗಿದೆ. ಆ ತಾಲ್ಲೂಕು ನನ್ನ ಕ್ಷೇತ್ರವಾಗಿರುವುದರಿಂದ ಮತ್ತು ಅಲ್ಲಿ ಐದು ಪಿ.ಯು.ಸಿ. ಕಾಲೇಜ್‌ಗಳು ಅಲ್ಲಿರುವುದರಿಂದ, ಒಂದೇ ಒಂದು ಪ್ರಥಮ ದರ್ಜೆ ಕಾಲೇಜ್ ಕೂಡ ಈಗ ಅಲ್ಲಿರುವುದಿಲ್ಲ. ನಮ್ಮಲ್ಲಿ ವಿದ್ಯಾರ್ಥಿಗಳು ಮೈಸೂರಿಗೆ ಹೋಗಬೇಕು ಇಲ್ಲದಿದ್ದರೆ ಇನ್ನೂ ದೂರ ಹೋಗಬೇಕಾಗುತ್ತದೆ. ಆದುದರಿಂದ ದಯಮಾಡಿ ತಾವು ಈಗ ಕೊಡತಕ್ಕಂಥ ಉತ್ತರದಲ್ಲಿಯೇ ಮಂಜೂರು ಮಾಡಿಕೊಡುತ್ತೇನೆ ಎಂದು ತಾವು ಹೇಳಬೇಕೆಂದು ನಾನು ಅಧ್ಯಕ್ಷರ ಮುಖೇನ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ವಸ್ತು ಸ್ಥಿತಿಯನ್ನು ತಾವು ಗೌರವಿಸುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅಂದರೆ ಅಪ್ರೀಶಿಯೇಟ್ ಮಾಡುತ್ತೀರಿ ಅಂತ ಏನಿದೆ ವಸ್ತುಸ್ಥಿತಿ ಎಂದರೆ ಕಳೆದ ಹಲವಾರು ವರ್ಷಗಳಿಂದ ರಾಜ್ಯದಲ್ಲಿ ಯಾವುದೇ ಭಾಗದಲ್ಲಿ ಪದವಿ ಕಾಲೇಜುಗಳು ಪ್ರಾರಂಭವಾಗಲಿಲ್ಲ. ಅದಕ್ಕೇನು ಕಾರಣ ಎಂಬ ಬಗ್ಗೆ ಆಮೇಲೆ ನಾನು ನೀವು ಬೇರೆ ವೇದಿಕೆ ಮೇಲೆ ಚರ್ಚೆ ಮಾಡೋಣ. ಒಟ್ಟಿನಲ್ಲಿ ಪ್ರಾರಂಭ ಆಗಲಿಲ್ಲ. ಈ ವರ್ಷ ಮೊದಲ ಬಾರಿಗೆ ಸರ್ಕಾರ ಬಜೆಟ್ ತಯಾರಿ ಮಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಅವರು ಈ situation ಅನ್ನು ಅಪ್ರೀಶಿಯೇಟ್ ಮಾಡಿ 9 ಹೊಸ ಪದವಿ ಕಾಲೇಜ್‌ಗಳನ್ನು ರಾಜ್ಯದಲ್ಲಿ ಪ್ರಾರಂಭ ಮಾಡುವುದಾಗಿ ಬಜೆಟ್‌ನಲ್ಲಿ ಭಾಷಣದಲ್ಲಿ ಓದಿ ಹೇಳಿದ್ದಾರೆ. ಆ 9 ಕಾಲೇಜ್‌ಗಳನ್ನು ಎಲ್ಲಿ ಪ್ರಾರಂಭ ಮಾಡಬೇಕು ಎಂಬ ಬಗ್ಗೆ ಹಲವಾರು ಕ್ರೈಟಿರಿಯಾಗಳನ್ನು ಫಿಕ್ಸ್ ಮಾಡಿ ಆ ಕ್ರೈಟೀರಿಯಾ ಪ್ರಕಾರ 9 ಕಾಲೇಜ್‌ಗಳನ್ನು ಪ್ರಾರಂಭ ಮಾಡಲು ಕೊಡಲಾಗಿದೆ. ಅದರಂತೆ 9 ಕಾಲೇಜ್‌ಗಳೂ ಈ ವರ್ಷ ಪ್ರಾರಂಭವಾಗುತ್ತಿದೆ. ಆ ಕ್ರೈಟೀರಿಯಾ ಪ್ರಕಾರ ದುರದೃಷ್ಟವಶಾತ್ ಸಂತೇಮರಳ್ಳಿ ಫಿಟ್ ಆಗಲಿಲ್ಲ. ಅಂದರೆ ಈ ತರಹದಲ್ಲಿಯೇ ನಮ್ಮ ಗೋಪಾಲಕೃಷ್ಣರವರು ಕೇಳಿದರು, ಬೇರೆ ಬೇರೆ ಸದಸ್ಯರುಗಳೂ ಕೂಡ ನನ್ನ ಕ್ಷೇತ್ರಕ್ಕೆ ಬೇಕು ಎಂದು ಕೇಳಿದರು. ಹೀಗಾಗಿ ಪ್ರಥಮ ದರ್ಜೆ ಕಾಲೇಜಿಗೆ ತುಂಬಾ ಡಿಮ್ಯಾಂಡ್ ಇದೆ. ನಿಜವಾಗಿಯೂ ಸಂತೋಷ ಪಡತಕ್ಕಂಥದ್ದು ಏನೆಂದರೆ ರಾಜ್ಯದ ಎಲ್ಲಾ ಭಾಗಗಳಲ್ಲಿ ಸರ್ಕಾರಿ ಪದವಿ ಕಾಲೇಜ್ ಕೊಡಿ ಎನ್ನತಕ್ಕಂಥ ಡಿಮ್ಯಾಂಡ್ ಇದೆ. ಆದರೆ

ಎಲ್ಲಾ ಡಿಮ್ಯಾಂಡ್‌ಗಳನ್ನು ಒಟ್ಟಿಗೆ ಮೀಟ್ ಮಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ 9 ಇರುವುದನ್ನು ಜಾಸ್ತಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹತ್ತಿರ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಈಗಾಗಲೇ ನಾನು ನಮ್ಮ ಇಲಾಖೆಯಿಂದ ಬೇಡಿಕೆಯನ್ನು ಇಟ್ಟಿದ್ದೇನೆ. ಅದೇನಾದರೂ ಸ್ಯಾಂಕ್ಷನ್ ಆಗಿ ಬಂದರೆ, ಆ ಹೊಸ ಕ್ರೈಟೀರಿಯಾದೊಳಗೆ ನಿಮ್ಮ ಕ್ಷೇತ್ರದನ್ನೂ ಫಿಟ್ಟಿಂಗ್ ಮಾಡತಕ್ಕಂಥ ಪ್ರಯತ್ನವನ್ನು ನಾನು ಮಾಡುತ್ತೇನೆ. ಯಾವುದೇ ಒಂದು ಕ್ರೈಟಿರಿಯಾ ಇಟ್ಟುಕೊಂಡು ಮಾಡಬೇಕಾಗುತ್ತದೆ. ಆ ಕ್ರೈಟೇರಿಯಾ ಮೂಲಕ ಮಾಡುತ್ತೇನೆ. ಆದರೆ ಈಗ ನಾನು ಅನೌನ್ಸ್ ಮಾಡಿರತಕ್ಕಂಥ ಪಟ್ಟಿಯೊಳಗೆ ಅನ್‌ಫಾರ್‌ಚ್ಯುನೆಟ್ಲಿ ಸಂತೇಮರಳ್ಳಿ ಇಲ್ಲ. ಆದರೆ ಮುಂದೆ ರಾಜ್ಯದ ಎಲ್ಲಾ ಭಾಗಗಳಲ್ಲಿ, ಅದರಲ್ಲೂ ತಾಲ್ಲೂಕು ಕೇಂದ್ರಗಳಲ್ಲಿ, ಮತ್ತು ಎಲ್ಲಿ ಪದವಿ ಕಾಲೇಜ್‌ಗಳು ಇಲ್ಲವೇ ಇಲ್ಲವೋ ಹಾಗೂ ಸುತ್ತಮುತ್ತ ಪಿ.ಯು.ಸಿ. ಕಾಲೇಜ್‌ಗಳು ಜಾಸ್ತಿ ಇವೆಯೋ ಅಲ್ಲೆಲ್ಲಾ ಕೊಡಲು ಪ್ರಯತ್ನ ಮಾಡುತ್ತೇವೆ. ಈಗ ಇರುವ ಕ್ರೈಟೀರಿಯಾದೊಳಗೆ ಒಂದು ಕ್ರೈಟೀರಿಯಾವನ್ನು ನಾನು ಹೇಳಬಯಸುತ್ತೇನೆ. 60 ಕಿಮೀ. ದೂರದೊಳಗೆ ಪದವಿ ಕಾಲೇಜ್ ಎಲ್ಲೆಲ್ಲಿ ಇಲ್ಲವೋ ಅಲ್ಲೆಲ್ಲಾ ಒಂದು ಪದವಿ ಕಾಲೇಜ್ ಕೊಡಬೇಕು ಎಂದು ನನ್ನ ಮನಸ್ಸಿನಲ್ಲಿದೆ. ಆದರೆ ಇನ್ನೂ ತೀರ್ಮಾನವಾಗಲಿಲ್ಲ. ಈ ತರಹದ ಒಂದು ಯೋಚನೆ, ಯೋಜನೆಗಳನ್ನು ಮಾಡಿಕೊಂಡು ನಾವು ಮುಂದೆ ಹೆಜ್ಜೆ ಇಡುತ್ತಿದ್ದೇವೆ. ಆದರೆ ಇವೊತ್ತಿನ ಮಟ್ಟಿಗೆ ಹೇಳಬೇಕೆಂದರೆ ನನ್ನ ಕೈಯಲ್ಲಿ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಈಗಾಗಲೇ 9 ಕಾಲೇಜ್‌ಗಳನ್ನು ಕೊಡುತ್ತಿದ್ದೇವೆ. ಕಳೆದ ಏಳು ವರ್ಷಗಳಲ್ಲಿ ರಾಜ್ಯದೊಳಗೆ ಒಂದೇ ಒಂದು ಪದವಿ ಕಾಲೇಜ್ ಪ್ರಾರಂಭವಾಗಿರಲಿಲ್ಲ. ಆದರೆ ಈ ವರ್ಷ ಏಕ್‌ದಂ 9 ಕಾಲೇಜ್‌ಗಳನ್ನು ಪ್ರಾರಂಭ ಮಾಡಲಾಗುತ್ತಿದೆ. ಹೀಗಾಗಿ ತಾವು ಇದರ ಕಡೆ ದಯಮಾಡಿ ಗಮನ ಕೊಟ್ಟು ನೋಡಿ. ನನಗೆ ಸಹಕಾರ ಕೊಟ್ಟರೆ ನಾನು ಸಂತೇಮರಳ್ಳಿಯ ವಿಚಾರವನ್ನು ಬಹಳ sympathetic ಆಗಿ view ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಧ್ರುವನಾರಾಯಣರವರ ಕ್ಷೇತ್ರ ಮೀಸಲು ಕ್ಷೇತ್ರವಾಗಿದೆ. ಮೀಸಲು ಕ್ಷೇತ್ರವನ್ನು ಫಿಕ್ಸ್ ಮಾಡುವಾಗ ಎಸ್‌ಸಿ:ಎಸ್‌ಟಿ ಜನಸಂಖ್ಯೆ ಹೆಚ್ಚು ಇರುವುದನ್ನು ನೋಡಿಕೊಂಡೇ ನಿಗದಿ ಮಾಡುತ್ತಾರೆ. ತಮಗೆ ಗೊತ್ತಿರುವ ಹಾಗೆ ಚಾಮರಾಜನಗರ ಬಹಳ ಹಿಂದುಳಿದ ಪ್ರದೇಶ. ಆದ್ದರಿಂದ ಅವರು ಒಂದು ಪದವಿ ಕಾಲೇಜ್ ಬೇಕೆಂದು ಕೇಳಿದ್ದಾರೆ. ಕ್ರೈಟೀರಿಯಾ ಬಗ್ಗೆ ಶಂಕರಮೂರ್ತಿಯವರ ನಾಲೆಡ್ಜ್‌ಗೆ ಬರದೇ ಬಹಳಷ್ಟು ಕೆಲಸಗಳು ನಡೆಯುತ್ತಿದೆ. ಹೊರಟ್ಟಿಯವರ ಗಮನಕ್ಕೆ ಬರದಂತೆ ಕೂಡ ನಡೆಯುತ್ತಿದೆ. ಅವರಿಗೂ ಕೂಡ ಗೊತ್ತಿಲ್ಲ. ಈಗಾಗಲೇ ಹೊಸದಾಗಿ ಎಷ್ಟು ಹೈಸ್ಕೂಲ್‌ಗಳನ್ನು ಈ ಸರ್ಕಾರ ಬಂದ ಮೇಲೆ ಕೊಟ್ಟಿದೆ. ಅದನ್ನು

ಯಾವ ಯಾವ ಕ್ರೈಟೀರಿಯಾ ನೋಡಿಕೊಂಡು, ಯಾವ ಯಾವ ಜಿಲ್ಲೆಗಳಿಗೆ ಎಷ್ಟು ತಾವು ಜ್ಯೂನಿಯರ್ ಕಾಲೇಜ್‌ಗಳನ್ನು ಕೊಟ್ಟಿದ್ದೀರಿ ಎಂಬ ಬಗ್ಗೆ ಪಟ್ಟಿಯನ್ನು ಈ ಸದನದಲ್ಲಿ ಇಡಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಸ್ವಲ್ಪ ವಿರೋಧ ಪಕ್ಷದ ನಾಯಕರು ಗಮನಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಹೈಸ್ಕೂಲ್ ಹಾಗೂ ಪದವಿ ಪೂರ್ವ ಕಾಲೇಜ್ ನನ್ನ ಇಲಾಖೆಗೆ ಬರುವುದಿಲ್ಲ. ನನಗೆ ಪದವಿ ಕಾಲೇಜ್ ಬರುತ್ತದೆ. ಸಂತೇಮರಳ್ಳಿಯಲ್ಲಿ ಪದವಿ ಕಾಲೇಜ್ ಕೇಳಿದ್ದಾರೆ. ಅದರ ಬಗ್ಗೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಎನ್. ಧರ್ಮಸಿಂಗ್: ಶಂಕರಮೂರ್ತಿಯವರೇ, ಅದು ನನಗೆ ಗೊತ್ತಿದೆ. ಈಗ ತಾವು ಕ್ರೈಟೀರಿಯಾ ಬಗ್ಗೆ ತಾವು ಹೇಳಿದಿರಿ. ಆದರೆ ತಮಗೇ ಗೊತ್ತಿರವುದಿಲ್ಲ, ಹೊರಟ್ಟಿಯವರಿಗೇ ಗೊತ್ತಿರುವುದಿಲ್ಲ, ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹೈಸ್ಕೂಲ್‌ಗಳನ್ನು ಮತ್ತು ಜೂನಿಯರ್ ಕಾಲೇಜ್‌ಗಳನ್ನು ಕೊಟ್ಟಿದ್ದೀರಿ ಎಂಬ ಬಗ್ಗೆ ಆ ಪಟ್ಟಿಯನು ಸದನದಲ್ಲಿ ಇಡಿ.

ಶ್ರೀ .ಡಿ.ಹೆಚ್. ಶಂಕರಮೂರ್ತಿ: ಅದು ಮತ್ತೊಮ್ಮೆ.....

ಶ್ರೀ ಆರ್. ಧ್ರುವನಾರಾಯಣ: ಮಾನ್ಯ ಅಧ್ಯಕ್ಷರೆ, ಡಾ: ನಂಜುಂಡಪ್ಪ ವರದಿ ಪ್ರಕಾರ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಎಂದು 39 ತಾಲ್ಲೂಕುಗಳನ್ನು ಮಾಡಿದ್ದಾರೆ. ಅದರಲ್ಲಿ ನನ್ನ ತಾಲ್ಲೂಕು ಇದೆ. ದಯಮಾಡಿ ತಾವು ಮುಂದೆ ಬರತಕ್ಕಂಥ ಪ್ರಥಮ ಸ್ಥಾನದಲ್ಲಿಯೇ ನಮಗೆ ಮಂಜೂರು ಮಾಡಿಕೊಡಬೇಕೆಂದು ದಯಮಾಡಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಾಲರಾಜ್: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ. ನಮ್ಮ ಕೊಳ್ಳೆಗಾಲದಲ್ಲಿ ಒಂದು ಪದವಿ ಕಾಲೇಜು ಇದೆ. ಅದಕ್ಕೆ ಇತಿಹಾಸ ಇರತಕ್ಕಂಥಾದ್ದು. ಕಳೆದ ಎರಡು ವರ್ಷಗಳಿಂದ ನಾನು ನೂರಾರು ಪತ್ರಗಳನ್ನು ಬರೆದಿದ್ದೇನೆ. ಮಂತ್ರಿಗಳನ್ನೂ ಸಹ ಹಲವಾರು ಬಾರಿ ಭೇಟಿಯಾಗಿದ್ದೇನೆ. ಕಮಿಷನರ್ ಜೊತೆ ಮಾತಾಡಿದ್ದೇನೆ. ಸೈನ್ಸ್ ಫ್ಯಾಕಲ್ಟಿಯಲ್ಲಿ ಒಂದೊಂದು ವಿಭಾಗದಲ್ಲಿ ಪೂರ್ಣ ಪ್ರಮಾಣದಲ್ಲಿ ಲೆಕ್ಚರರ್ಸ್ ಇಲ್ಲ. ಅದರಿಂದ ಪ್ರತಿ ವರ್ಷ ಸ್ಟೈಕ್ ಆಗುತ್ತದೆ. ಕಾಲೇಜು ಇದ್ದರೂ ಕೂಡ ಬೇಕಾದಂತಹ ಲೆಕ್ಚರರ್ಸ್ ಅನ್ನು ಕೊಡುವ ವಿಚಾರದಲ್ಲಿ ಯಾವಾಗ ಸರಿಪಡಿಸುತ್ತೀರಿ ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಮಾನ್ಯ ಉನ್ನತ ಶಿಕ್ಷಣ ಸಚಿವರು ಆ ಮನೆಗೆ ಹೋಗಬೇಕು. ಅವರಿಗೆ ಸಂಬಂಧಪಟ್ಟ ಎರಡು ಪ್ರಶ್ನೆಗಳಿಗೆ ಉತ್ತರಿಸುವುದು ಇದೆ. ಆದುದರಿಂದ ಅವರಿಗೆ ಅವರಿಗೆ ಮೊದಲು ಅವಕಾಶ ಮಾಡಿಕೊಡುತ್ತೇನೆ.